ಶ್ರೀ ಎಂ. ಚಿಕ್ಕಲಿಂಗಯ್ಯ.—ಅದಕ್ಕೆ ಕಾಲ ಬರುತ್ತದೆ; ಆಗ ನಾವೇ ತೆಗೆದುಕೊಳ್ಳುತ್ತೇವೆ.

Sri H. M. CHANNABASAPPA.—I am now only drawing the attention of Hon'ble Members to the question that is now before us. I should like to submit that we have absolutely no objection to look at this question in an objective manner. At the proper time Government will look into the feelings ventilated by Hon'ble Members. With this assurance I hope the Hon'ble Member will kindly withdraw his resolution.

Mr. SPEAKER.—I want to bring it to the notice of the House that Public Service Commission Rules were placed and moved by Sri Kadidal Manjappa and they were accepted by this House in 1953.

Now, what does the Hon'ble Member propose to do with his resolution?

ಶ್ರೀ ಆರ್. ಮುನಿನ್ಯಾಮಯ್ಯ.—ಭರವಸೆ ಕೊಟ್ಟಿರುವ ರೀತಿಯಲ್ಲಿ ಜಾಗ್ರತೆ ರೂಲ್ಸ್ ತಿದ್ದುಪಡಿಮಾಡಿ ತೆಗೆದುಕೊಳ್ಳುತ್ತಾರೆ ಎಂಬ ಭರವಸೆಯಿಂದ ನನ್ನ ನಿರ್ಣಯವನ್ನು ವಾಪಸು ತೆಗೆದುಕೊಳ್ಳಲು ಸಭೆಯ ಅನುಮತಿ ಬೇಡುತ್ತೇನೆ.

The resolution was, by leave withdrawn.

Mr. SPEAKER.—Next resolution; Sri T. G. Thimme Gowda.

No. (3.) Grant of Loan to Tiptur Market Committee, to construct a Building to accommodate Merchants, Offices and Shops.

ಶ್ರೀ ಟಿ. ಜಿ. ತಿಮ್ಮೇಗೌಡ (ತಿಪಟೂರು).—ಸ್ವಾಮಿ, ನನ್ನ ನಿರ್ಣಯ ಈ ರೀತಿಯಿದೆ :—

> "ವರ್ತಕರಿಗೂ, ಆಫೀಸುಗಳಿಗೂ ಮತ್ತು ಅಂಗಡಿಗಳಿಗೂ ಸ್ಥಳಾವಕಾಶವನ್ನೇರ್ಪಡಿಸಲು ಒಂದು ಕಟ್ಟಡವನ್ನು ಕಟ್ಟಲು ತಿಪಟೂರು ಮಾರ್ಕೆಟ್ ಸಮಿತಿಯವರಿಗೆ ಕೂಡಲೆ ಕನಿಷ್ಟ ಪಕ್ಷ ಐದು ಲಕ್ಷ ರೂಪಾಯಿಗಳನ್ನಾದರೂ ಮಂಜೂರ್ಮಾಡಬೇಕೆಂದು ಈ ಸಭೆಯವರು ಅಭಿಪ್ರಾಯ ಪಡುತ್ತಾರೆ."

ಸ್ವಾಮಿ, 1948 ನೆಯ ಇಸವಿಯಲ್ಲಿ ತಿಪಟೂರಿನಲ್ಲಿ ಒಂದು ರೆಗ್ಯುಲೇಟೆಡ್ ಮಾರ್ಕೆಟ್ ಸ್ಥಾಪಿಸಲು ಸರ್ಕಾರದವರು 28 ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ಮಂಜೂರು ಮಾಡಿದರು. ಅದರ ಪ್ರಕಾರ ಸರ್ಕಾರದವರು ಈ ರೆಗ್ಯುಲೇಟೆಡ್ ಮಾರ್ಕೆಟ್ಟಿನ ಸಂಬಂಧದಲ್ಲಿ ವರ್ತಕರಿಗೆ ಮಳಿಗೆಗಳನ್ನು ಮತ್ತು ಆಫೀಸಿಗೆ ಕಟ್ಟಡವನ್ನೂ ಕಟ್ಟಿಸಿಕೊಡಲು ಮಂಜೂರಾತಿಯನ್ನಿತ್ತರು. ಆದರೆ ಆ ಯೋಜನೆ ಪ್ರಕಾರ ಕೆಲಸ ಕಾರ್ಯಗತವಾಗಿಲ್ಲ. ಈಗ ಈ ರೆಗ್ಯುಲೇಟೆಡ್ ಮಾರ್ಕೆಟ್ಟಿಗೆ ಸರ್ಕಾರದವರು 56 ಎಕರೆ ಜಮೀನನ್ನು ಅಕ್ವೈರ್ ಮಾಡಿಕೊಂಡು ಮಾರ್ಕೆಟ್ ಸಮಿತಿಯವರಿಗೆ ಒಡಗಿಸಿದ್ದಾರೆ. ಆ ಸಮಿತಿಯವರು ಆ ಸ್ಥಳದಲ್ಲಿ 108 ಸೈಟುಗಳನ್ನು ಏಂಗಡಿಸಿ ಆ ಸೈಟುಗಳನ್ನು ಮಾರ್ಚ್ ಎಂಟನೆಯ ತಾರೀಖು ಪಬ್ಲಿಕ್ ಹರಾಜಿಗೆ ಇಟ್ಟಿದ್ದಾರೆ. ಅದರ ಉದ್ದೇಶ ವರ್ತಕರು ಆ ಸೈಟುಗಳನ್ನು ತೆಗೆದುಕೊಂಡು ಅಲ್ಲಿ ಕಟ್ಟಡ ಕಟ್ಟಿಕೊಂಡು ವ್ಯಾಪಾರ ಮಾಡಬೇಕೆಂಬುದು. ಆ ರೀತಿ ತೀರ್ಮಾನ ಮಾಡಿದ್ದಾರೆ. ಮೊದಲು ಸರ್ಕಾರದವರು 28 ಲಕ್ಷ ರೂಪಾಯಿಗಳ ಯೋಜನೆ ಹಾಕಿದಾಗ ವರ್ತಕರಿಗೆ ಮೊಬಲಗನ್ನು ಸಾಲದ ರೂಪವಾಗಿ ಒದಗಿಸಿ ಅದನ್ನು ಅವರಿಂದ ಕಂತುಗಳ ಪ್ರಕಾರ ವಸೂಲು ಮಾಡಿಕೊಳ್ಳಬೇಕು, ಸರ್ಕಾರದವರೇ ಮಳಿಗೆ ಕಟ್ಟಿಸಿ ಕೊಡಬೇಕು ಎಂದು ತೀರ್ಮಾನ ಮಾಡಲಾಯಿತು. ಆ ಯೋಜನೆ ಕಾರ್ಯರೂಪಕ್ಕೆ ಬರಲಿಲ್ಲ ಮತ್ತು ಈ ಯೋಜನೆಯನ್ನು ಸರ್ಕಾರದವರು ಮುಂದುವರಿಸಲಿಲ್ಲ. ಈಚೆಗೆ ರೆಗ್ಯುಲೇಟೆಡ್ ಮಾರ್ಕೆಟ್ ಸಮಿತಿಯವರು ವರ್ತಕರೇ ಮಳಿಗೆ ಕಟ್ಟಿಕೊಂಡು ವ್ಯಾಪಾರ ನಡೆಸಬೇಕೆಂದು ತೀರ್ಮಾನಿಸಿ ಸೈಟುಗಳನ್ನು ಹರಾಜಿಗೆ ಇಟ್ಟಿರುತ್ತಾರೆ. ಆದರೆ ಸರ್ಕಾರದವರು ಮಾಡಿರುವ ಪ್ಲಾನ್ ಪ್ರಕಾರ ಹರಾಜಿನಲ್ಲಿ ಸೈಟನ್ನು ಕೊಂಡು ಯಾರ್ಡಿನಲ್ಲಿ ಮಳಿಗೆ ಕಟ್ಟಿಕೊಂಡು ವ್ಯಾಪಾರಮಾಡಲು ಶೇಕಡ 90 ಮಂದಿ ವರ್ತಕರಿಗೆ ಸಾಧ್ಯವಿರುವುದಿಲ್ಲ. ಈಗ ವರ್ತಕರು ತುಂಬ ಬಡವರಾಗಿ ಆರ್ಥಿಕಮಟ್ಟದಲ್ಲಿ ಬಹಳ ಹಿಂದುಳಿದಿರುವುದರಿಂದ ಸರ್ಕಾರದ ಉದ್ದೇಶ ವಿರುವಂತೆ ಅವರು ಯಾರ್ಡಿನಲ್ಲಿ ಕಟ್ಟಡಗಳನ್ನು ಸ್ವಂತವಾಗಿ ಕಟ್ಟಿಕೊಂಡು ವ್ಯಾಪಾರಮಾಡಲು ತುಂಬ ಕಷ್ಟವಿರುವುದರಿಂದ ಸರ್ಕಾರದವರು ಹಣವನ್ನು ಒದಗಿಸಿ ಸುಲಭ ಕಂತುಗಳಲ್ಲಿ ವರ್ತಕರಿಗೆ ಒದಗಿಸಿಕೊಟ್ಟು ವರ್ತಕರು ಮಳಿಗೆಗಳನ್ನು ಕಟ್ಟಿಕೊಂಡು ವ್ಯಾಪಾರ ಮಾಡಲು ಸಹಾಯ ಮಾಡಬೇಕಾಗಿ ಪ್ರಾರ್ಥಿಸಿಕೊಳ್ಳುತ್ತೇನೆ. ವರ್ತಕರು ಸಹಾ ಈ ರೀತಿಯಲ್ಲಿಯೇ ಸರ್ಕಾರಕ್ಕೆ ಮನವಿ ಮಾಡಿಕೊಂಡಿರುತ್ತಾರೆ. ನನಗೆ ತಿಳಿದಮಟ್ಟಿಗೆ ತಿಪಟೂರು ಟೌನಿನಲ್ಲಿ ಶೇಕಡ 90 ಮಂದಿ ವರ್ತಕರಿಗೆ ವ್ಯಾಪಾರಮಾಡಲು ಮೇಲೆ ಹೇಳಿದಂತೆ ಕಷ್ಟವಿರುವುದರಿಂದ ಸರ್ಕಾರದವರು ದಯವಿಟ್ಟು 5 ಲಕ್ಷ ರೂಪಾಯಿಗಳನ್ನು ಸಮಿತಿಗೆ ಕೊಟ್ಟು ಸಾಲದ ರೂಪದಲ್ಲಿ ಬಹಳ ಕಂತುಗಳಲ್ಲಿ ವಾಪಸು ಪಡೆಯುವಂತೆ ವರ್ತಕರಿಗೆ ಹಣ ಒದಗಿಸಿಕೊಟ್ಟು ವರ್ತಕರು ಕಟ್ಟಡ ಕಟ್ಟಿಸಿಕೊಂಡು ವ್ಯಾಪಾರ ಮಾಡಲು ಅವಕಾಶ ಕಲ್ಪಿಸಬೇಕಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

ಈಗ ಸಾಮಾನ್ಯವಾಗಿ ಈ ಮಾರ್ಕೆಟ್ ಬಿಲ್ಡಿಂಗ್‌ಗಳನ್ನು ಕಟ್ಟಬೇಕಾದರೆ 10-12 ಸಾವಿರ ರೂಪಾಯಿಗಳ ಮೇಲೆ ಖರ್ಚು ಬರುತ್ತದೆ. ಹೀಗೆ ತಮ್ಮ ಕೈಯಿಂದ ದುಡ್ಡನ್ನು ಪೆಚ್ಚಮಾಡಿ ಕಟ್ಟಡಗಳನ್ನು ಕಟ್ಟಿಸಿಕೊಂಡು ಅಲ್ಲಿ ವ್ಯಾಪಾರಮಾಡತಕ್ಕಂಥ ಶೈತನ್ಯ ಕೇವಲ 8-10 ಜನ ದೊಡ್ಡ ದೊಡ್ಡ ವರ್ತಕರಿಗೆ ಮಾತ್ರ ಸಾಧ್ಯವಿರುತ್ತದೆ. ಬಾಕಿಯವರಿಗೆ ಸಾಧ್ಯವಾಗುವುದಿಲ್ಲ. ತಾವು ಈ ರೆಗ್ಯುಲೇಟ್ ಮಾರ್ಕೆಟ್ಟನ್ನು ಆ ಹೊಸ ಯಾರ್ಡಿಗೆ ವರ್ಗಾಯಿಸದೆ ಎಷ್ಟೆಷ್ಟು ನಿಧಾನ ಮಾಡಿದರೆ ಅಷ್ಟು ರೈತರಿಗೆ ಅವರು ಬೆಳೆದಂಥ ಬೆಳೆಗೆ ಒಂದು ನೇರವಾದ ಬೆಲೆ ಸಿಕ್ಕಲು ಅವಕಾಶವಿರುವುದಿಲ್ಲ. ಈ ಕಾರಣದಿಂದ ಸರ್ಕಾರದವರು ಬೇಗನೆ ನಾನಾಗಲೇ ಕೇಳಿದಂತೆ ಮೊಬಲಗನ್ನು ಒದಗಿಸಬೇಕು; ಇಲ್ಲವೇ ಸರ್ಕಾರದವರೇ ಅಲ್ಲಿ ಈ ಕಟ್ಟಡ

ಗಳನ್ನು ಕಟ್ಟಿಸಿ ಸುಲಭವಾದ ಬಾಡಿಗೆಗೆ ಕೊಟ್ಟರೂ ಸರಿಯೇ. ಅಂತೂ ಇದನ್ನು ಸರ್ಕಾರದವರು ಅನುಮೋದಿಸಬೇಕಾಗಿದೆ. ಈ ದಿವಸ ಆ ತಿಪಟೂರಿನಲ್ಲಿ ನಡೆಯುತ್ತಿರುವ ವ್ಯಾಪಾರ ಬಹಿರಂಗವಾಗಿಲ್ಲ. ರೈತರು ತರತಕ್ಕಂಥ ಮಾಲನ್ನು ಆಯಾ ಊರಿನಲ್ಲಿರುವ ವರ್ತಕರ ಮಳಿಗೆಗಳಿಗೇ ತೆಗೆದುಕೊಂಡು ಹೋಗಿ ಹಾಕಿ ಅಲ್ಲಿ ತೂಕ ಇತ್ಯಾದಿಗಳನ್ನೆಲ್ಲಾ ಮಾಡಿ ಮುಗಿಸಿದ ನಂತರ ರೆಗ್ಯುಲೇಟ್ ಮಾರ್ಕೆಟ್ ಆಫೀಸಿಗೆ ಬಂದು ಅಲ್ಲಿ ಮಾಲಿನ ಹರಾಜನ್ನು ನಡೆಸಲಾಗುತ್ತಿದೆ. ಹೀಗೆ ಅಲ್ಲಿ ವ್ಯಾಪಾರ ನಡೆಯುತ್ತಿರುವುದರಿಂದ ರೈತರಿಗೆ ನೇರವಾದ ಬೆಲೆಗಳು ಸಿಕ್ಕಲು ಅವಕಾಶವಿರುವುದಿಲ್ಲ. ಹೀಗಾಗಿ ಈ ದಿವಸ ಅಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ಟಿದ್ದರೂ ಅದರಿಂದ ರೈತರಿಗೆ ದೊರೆಯಬಹುದಾಗಿದ್ದ ಉಪಕಾರ ದೊರೆಯುತ್ತಿಲ್ಲ. ಆದಕಾರಣ ತಾವು ಈ ಸೌಲಭ್ಯಗಳನ್ನು ಆ ರೈತರ ಹಿತದೃಷ್ಟಿಯಿಂದ ಬೇಗನೆ ಒದಗಿಸಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇದೇ ಸಂದರ್ಭದಲ್ಲಿ ನಾನು ಮತ್ತೊಂದು ಅಂಶವನ್ನು ತಮ್ಮಲ್ಲಿ ವಿನಂತಿಮಾಡಿಕೊಳ್ಳಬೇಕಾಗಿದೆ. ತಾವು ಈ ದಿವಸ ಆ ತಿಪಟೂರಿನಲ್ಲಿ ಅಲ್ಲಲ್ಲೇ ಇರತಕ್ಕ ವ್ಯಾಪಾರದ ಮಳಿಗೆಗಳನ್ನು ಮತ್ತು ಗೋಡೌನುಗಳನ್ನು ಈ ಹೊಸ ಸ್ಥಳಕ್ಕೆ ಬದಲಾಯಿಸಿದರೆ ಊರಿನಲ್ಲಿ ಬಾಡಿಗೆ ವಾಸಮಾಡತಕ್ಕಂಥ ಜನರಿಗೆ ಸುಲಭವಾಗಿ ಬಾಡಿಗೆ ಮನೆಗಳು ಹಾಸನಕ್ಕೆ ದೊರೆಯುವುದೇ ಅಲ್ಲದೆ ಈ ದಿವಸ ಊರಿನಲ್ಲಿ ಈ ಮಾಲನ್ನು ದಾಸ್ತಾನು ಮಾಡುತ್ತಿದ್ದುದರಿಂದ ಊರಿನಲ್ಲಿ ಇಲ್ಲಿ—ಹೆಗ್ಗಣಗಳ ಕಾಟ ಹೆಚ್ಚಾಗಿದ್ದುದು ತಪ್ಪಿಹೋಗುತ್ತವೆ; ಊರು ನೈರ್ಮಲ್ಯದಿಂದರಲು ಹೆಚ್ಚು ಸಹಾಯಕವಾಗುತ್ತದೆ. ಈ ಎಲ್ಲ ದೃಷ್ಟಿಗಳಿಂದಲೂ ಇದು ತೀರಾ ಅಗತ್ಯವಾದದ್ದು. ಈ ಸೌಲಭ್ಯಗಳನ್ನು ಸರ್ಕಾರದವರು ಒದಗಿಸಿಕೊಡುತ್ತಾರೆಂದು ನಾನು ಭಾವಿಸಿಕೊಂಡಿದ್ದೇನೆ.

ಈ ದಿವಸ ಪ್ರಾಂತೀಯ ಸರ್ಕಾರಗಳೂ ಮತ್ತು ಕೇಂದ್ರಸರ್ಕಾರ ಸಹ ಈ ಗೃಹನಿರ್ಮಾಣದ ಬಗ್ಗೆ ಬಹಳ ಸಹಾಯ ನೀಡಲು ಮುಂದೆ ಬಂದಿರತಕ್ಕ ವಿಚಾರ ಸರ್ವರಿಗೂ ತಿಳಿದುದ್ದೇ ಆಗಿದೆ. ಈ ಯೋಜನೆಯಿಂದ ಮನೆಯಿಲ್ಲದವರಿಗೆ ಮನೆಗಳನ್ನು ಒದಗಿಸಲು ಅವಕಾಶಮಾಡಿರುತ್ತಾರೆ. ಹೀಗೆ ಮನೆಗಳನ್ನು ಒದಗಿಸುವುದರ ಯೋಜನೆಯಲ್ಲಿ ಸಾಲ ಕೊಡತಕ್ಕ ಯೋಜನೆ ಕೂಡ ಅಡಕವಾಗಿದೆ. ಈ ದಿವಸ ತಾವು ಯೋಜನೆಯ ಬಗ್ಗೆ ಈ ಹೌಸ್ ಬಿಲ್ಡಿಂಗ್ ಸೊಸೈಟಿಯವರಿಗೆ ಯಾವ ರೀತಿ ಧನ ಸಹಾಯವನ್ನು ಸರ್ಕಾರದವರು ನೀಡಲು ಮುಂದೆ ಬಂದಿರುತ್ತೀರೋ ಅದೇ ಮಾದರಿಯಲ್ಲಿ ನಮಗೂ ಸಹ ತಿಪಟೂರು ರೆಗುಲೇಟೆಡ್ ಮಾರ್ಕೆಟ್ಟಿಗೆ ಈ 5 ಲಕ್ಷ ರೂಪಾಯಿಗಳ ಸಹಾಯವನ್ನು ಒದಗಿಸಿಕೊಟ್ಟ ವ್ಯಾಪಾರಸ್ಥರು ಮಾರ್ಕೆಟ್ಟು ಯಾರ್ಡಿನಲ್ಲಿ ವ್ಯಾಪಾರಮಾಡಲು ಸಹಾಯ ಮಾಡಬೇಕೆಂದು ಹೇಳಿ ನಾನು ಈ ನಿರ್ಣಯವನ್ನು ನಭೆಯ ಮುಂದೆ ಮಂಡಿಸುತ್ತೇನೆ.

Mr. SPEAKER.—Resolution moved:

"This Assembly is of opinion that at least five lakhs of rupees be granted immediately to Tiptur Market Committee for the construction of a building to accommodate merchants, offices and shops"

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ; ಈ ನಿರ್ಣಯವನ್ನು ನಾನು ಅನುಮೋದಿಸುತ್ತೇನೆ. ಈ ತಿಪಟೂರಿನಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ ಸ್ಥಾಪನೆಯಾಗಿ ಇಲ್ಲಿಗಾಗಲೇ ಹತ್ತು ವರ್ಷಗಳ ಮೇಲಾಯಿತು. 1946ರ ರಲ್ಲೇ ಈ ಆಕ್ಟ್‌ನ್ನು ಅಲ್ಲಿ ಜಾರಿಗೆ ತಂದರು. ಇದನ್ನು ಅಲ್ಲಿ ಜಾರಿಗೆ ತಂದುದರ ಉದ್ದೇಶ ರೈತರಾದವರು ತಾವು ಬೆಳೆಯತಕ್ಕಂಥ ಮಾಲುಗಳನ್ನು ಪೇಟೆಗೆ ಮಾರಾಟಕ್ಕಾಗಿ ತಂದಾಗ ಆ ಮಾಲುಗಳನ್ನು ಸರ್ಕಾರದಿಂದ ನೇಮಕವಾದ ರೆಗ್ಯುಲೇಟೆಡ್ ಮಾರ್ಕೆಟ್ ಸೆಕ್ರೆಟರಿಗಳವರ ರೂಬ್ ರೂಬ್ ಹರಾಜು ಮಾಡಿ, ರೈತರಿಗೆ ಒಂದು ನೇರವಾದ ಬೆಲೆಯು ಸಿಕ್ಕುವಂತೆ ಮಾಡಬೇಕೆಂಬುದೇ ಆಗಿತ್ತು. ಹೀಗೆ ನಡೆಸುವಾಗ ಆ ರೈತರ ಮಾಲನ್ನು ಮಾರಾಟಮಾಡತಕ್ಕವರಿಗೂ ಮತ್ತು ಆ ಮಾಲನ್ನು ನೇರವಾಗಿ ಕೊಳ್ಳತಕ್ಕವರಿಗೂ ಮಧ್ಯೆ ಇರತಕ್ಕಂಥ ಮಧ್ಯಸ್ಥಗಾರರಿಂದ ಆಗತಕ್ಕ ಅನರ್ಥಗಳನ್ನು ಕಮ್ಮಿಮಾಡಬೇಕೆಂಬುದೇ ಇದರ ಮುಖ್ಯೋದ್ದೇಶವಾಗಿತ್ತು. ಇದಕ್ಕಾಗಿ ಈಗಾಗಲೇ ಅಲ್ಲಿ ಸುಮಾರು 60-70 ಎಕರೆ ಜಮೀನನ್ನು ಸರ್ಕಾರ ಅಕ್ವಯಿರ್ ಮಾಡಿಕೊಂಡಿದೆ. ಆ ಸ್ಥಳದಲ್ಲಿ 108 ಅಂಗಡಿ ಮಳಿಗೆಗಳನ್ನು ಕಟ್ಟಿಸಬೇಕೆಂದು ಕೆಲಸ ಪ್ರಾರಂಭಿಸಲ್ಪಟ್ಟಿತ್ತು. ಇದಕ್ಕಾಗಿ ಹಿಂದಿದ್ದ ಸರ್ಕಾರದವರು 26 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದರು. ಹೀಗೆಲ್ಲಾ ನಡೆದಿದ್ದಂಥ ವಿಷಯಾದು ಹಟ್ಟಾತ್ತಾಗಿ ನಿಂತು ಹೋಗಿ, ಈ ರೆಗ್ಯುಲೇಟೆಡ್ ಮಾರ್ಕೆಟ್ ಆಕ್ಟ್ ಅಲ್ಲಿ ಜಾರಿಯಲ್ಲಿದ್ದರೂ ಸಹ ಈ ಹೊತ್ತೂ ಅಲ್ಲಿಯ ವ್ಯಾಪಾರ ಊರಿನಲ್ಲೇ ಅವರವರ ಮನೆಗಳ ಮುಂದೆಯೇ ನಡೆಯುತ್ತಿದೆ. ಹೀಗಾಗಿ ಈ ವ್ಯಾಪಾರವನ್ನು ಅಲ್ಲಿ ಒಂದು ಕಂಟ್ರೋಲ್ ವ್ಯವಸ್ಥೆಗೆ ತರಲು ಸಾಧ್ಯವಿಲ್ಲದಂತಾಗಿದೆ. ಅಧಿಕಾರಿಗಳು ಪ್ರತಿಯೊಂದು ಮಳಿಗೆಗೂ ಹೋಗಿ ರೈತನಿಗೆ ದೊರೆಯಬೇಕಾದ ಸೌಲಭ್ಯಗಳನ್ನು ದೊರೆಕಿಸಿಕೊಡಲು ಅವರಿಗೆ ಸಾಧ್ಯವಾಗಿಲ್ಲ. ಆದುದರಿಂದ ಈ ಹೊತ್ತು ಈ ಮಾರ್ಕೆಟ್ ಯಾರ್ಡಿನಲ್ಲಿ ಹೊಸದಾಗಿ ವ್ಯಾಪಾರದ ಮಳಿಗೆಗಳನ್ನು ಅತ್ಯಂತ ಜರೂರಾಗಿ ಕಟ್ಟಿಸಬೇಕಾದದ್ದು ಅತ್ಯವಶ್ಯಕ. ಈ ದಿವಸ ಈ ಊರಿನಲ್ಲಿ ವ್ಯಾಪಾರ ಮಾಡತಕ್ಕ ವರ್ತಕರೆಲ್ಲಾ ಅಲ್ಲಿಗೆ ಹೋಗಲು ಮಳಿಗೆಗಳಿಲ್ಲ. ಇವರು ಬಾರದ ವಿನಾ ಅಲ್ಲಿ ಮಳಿಗೆಗಳು ಆಗುವಂತಿಲ್ಲ. ಹೀಗಾಗಿದೆ. ಈ ದಿವಸ ಅಲ್ಲಿ ಆ ಭೂಮಿಯನ್ನು 99 ವರ್ಷಗಳ ಲೀಜ್ ಮೇಲೆ ತೆಗೆದುಕೊಂಡಿದ್ದಾರೆ. ಹೀಗಿರುವಾಗ ಆ ಭೂಮಿಯನ್ನು ಇವರು ಈ ದಿವಸ ಹೇಗೆ ಹರಾಜು ಮಾಡುತ್ತಾರೋ ಅದು ನನಗಂತೂ ಅರ್ಥವಾಗುತ್ತಿಲ್ಲ. ಇದರಿಂದ ಮುಂದೇನು ಪರ್ಯವಸಾನವಾಗುತ್ತದೋ ಎಂಬ ಸಂಶಯದಿಂದ ಅನೇಕರು ಈ ಭೂಮಿಗೆ ಕಿಮ್ಮತ್ತು ಕೊಡಲು ಹಿಂದಕ್ಕೆ ಸರಿಯುತ್ತಿದ್ದಾರೆ. ಆ ಊರಿಗೆ ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಾಗ್ಗೆ ಈ ವಿಚಾರವನ್ನೆಲ್ಲಾ ಅವರಿಗೆ ಕೂಲಂಕಷವಾಗಿ ತಿಳಿಸಲಾಗಿದೆ. ಅಲ್ಲಿ ಈಗ ಕಟ್ಟಿಸಬೇಕೆಂದಿರುವ ಮಳಿಗೆಗಳೆಲ್ಲಾ ಒಂದೇ ಮಾದರಿಯವುಗಳಾಗಿರಬೇಕಾಗಿದೆ. ಇವುಗಳನ್ನು ಸರ್ಕಾರದವರೇ ಕಟ್ಟಿಸಿಕೊಟ್ಟರೆ ಬಹಳ ಅನುಕೂಲ. ಸರ್ಕಾರಕ್ಕೆ ಬಾಡಿಗೆ ಬರುತ್ತದೆ. ಹೀಗಾದರೂ ಮಾಡಬಹುದು, ಇಲ್ಲವೇ ಯಾರಾರಿಗೆ ಸರ್ಕಾರದವರಿಂದ ಧನಸಹಾಯಬೇಕೋ ಅಂಥವರಿಗೆ ಸಹಾಯ ನೀಡಿ. ಈ ತೆರನಾದ ಸಹಾಯವಿಲ್ಲದೆ ಹೋದರೆ ಈ ದಿವಸ ಅಲ್ಲಿ ಕಟ್ಟಡಗಳಾಗುವುದು ಬಹಳ ಕಷ್ಟ. ಅನೇಕ ವರ್ತಕರು ಅಲ್ಲಿಗೆ ಹೋಗುವುದಕ್ಕೆ ಇಷ್ಟಪಡುತ್ತಿಲ್ಲ. 10-20 ವರ್ಷಗಳಿಂದಲೂ ಅಲ್ಲಿ ಇದೇ ಪರಿಸ್ಥಿತಿಯಿದೆ. ಆದಕಾರಣ ಇಂದಾದರೂ

(ಶ್ರೀ ಬಿ. ಹುಚ್ಚೇಗೌಡ)

ಸರ್ಕಾರದವರು ಆ ರೈತರಿಗೆ ಏನೇನು ಸೌಲಭ್ಯಗಳನ್ನು ಒದಗಿಸಬೇಕೆಂದಿದ್ದೀರೋ ಆ ಸಹಾಯಗಳನ್ನು ಒದಗಿಸಬೇಕಾದ್ದು ತೀರ ಅತ್ಯಗತ್ಯವೆಂದು ಹೇಳುತ್ತೇನೆ. ಈ ದಿವಸ ಅಲ್ಲಿ ಇರುವ ನಿವೇಶನಗಳನ್ನು ಅಪ್‌ಸೆಟ್ ಬೆಲೆಗೆ ಕೊಡಬೇಕಲ್ಲದೆ ಹರಾಜು ಮಾಡುವುದು ಸರಿಯಾದ ನೀತಿಯಲ್ಲ. ಇದರ ಜೊತೆಗೆ ಕೆಲಕೆಲವು ಭಾಗದ ಹಣವನ್ನು ಸರ್ಕಾರದವರು ಅವರಿಗೆ ಸಹಾಯ ನೀಡಲೇಬೇಕಾಗಿರುತ್ತದೆ. ಇಲ್ಲವೇ ಸರ್ಕಾರದವರೇ ಆ ಮಳಿಗೆಗಳನ್ನು ಕಟ್ಟಿಸಿಕೊಡಬೇಕಾಗುತ್ತದೆ. ಈ ಬಗ್ಗೆ ಸರ್ಕಾರ ಕೂಡಲೇ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಚಿಕ್ಕಣ್ಣ (ಜವಗಲ್).—ಅಧ್ಯಕ್ಷರೇ, ಈ ಸಭೆಯ ಮುಂದೆ ಇಟ್ಟಿರತಕ್ಕ ನಿರ್ಣಯವನ್ನು ನಾನು ಸಮರ್ಥಿಸುತ್ತಾ ಒಂದೆರಡು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ಇಚ್ಛೆಪಡುತ್ತೇನೆ. ಮೊದಲು ಸರ್ಕಾರದವರು ರೆಗ್ಯೂಲೇಟೆಡ್ ಮಾರ್ಕೆಟ್ ಆಕ್ಟನ್ನು ಜಾರಿಗೆ ತರುವುದಕ್ಕೆ ಮುಂಚೆ ಪ್ರತಿಯೊಂದು ಸ್ಥಳದಲ್ಲೂ ಕೂಡ ಕಟ್ಟಡಗಳನ್ನು ಮಾಡಿಕೊಟ್ಟು ಅಲ್ಲಿ ಮಾರ್ಕೆಟ್ ನಡೆಯುವ ಹಾಗೆ ಮಾಡಿ ಆ ಮೇಲೆ ಮಾರ್ಕೆಟ್ ಆಕ್ಟನ್ನು ಜಾರಿಗೆ ಕೊಟ್ಟರೆ ಬಹಳ ಒಳ್ಳೆಯದು ಎಂದು ಹೇಳಿ ನಾಲ್ಕಾರು ವರ್ಷಗಳಿಂದ ಅರಸೀಕೆರೆ ಮತ್ತು ತಿಪಟೂರು ತಾಲ್ಲೂಕಿನಲ್ಲಿ ಮಾರ್ಕೆಟ್ ಆಕ್ಟ್ ಜಾರಿಗೆ ಬಂದಾಗಿನಿಂದ ನನಗನ್ನಿಸುತ್ತದೆ. ಈ ಪರಿಸ್ಥಿತಿಯನ್ನು ಅನೇಕಸಾರಿ ಮಾನ್ಯ ಮಂತ್ರಿಗಳಿಗೂ ತಿಳಿಸಿದ್ದೇವೆ. ಮಾನ್ಯ ಶ್ರೀ ಹುಚ್ಚೇಗೌಡರು ಮತ್ತು ಶ್ರೀ ತಿಮ್ಮೇಗೌಡರು ರೈತರಿಗೆ ಯಾವ ರೀತಿ ತೊಂದರೆಯಾಗುತ್ತಿದೆ ಎಂಬ ವಿಚಾರವನ್ನು ವಿಶದವಾಗಿ ಹೇಳಿದ್ದಾರೆ. ಮೊದಲು ಕಟ್ಟಡಗಳನ್ನು ಏರ್ಪಾಡು ಮಾಡದೆ ಮಾರ್ಕೆಟ್ ಆಕ್ಟನ್ನು ಜಾರಿಗೆ ಕೊಡುವುದರಿಂದ ರೈತರಿಗೆ ಬಹಳ ತೊಂದರೆಯಾಗುತ್ತದೆ. ನೂರಾರು ಮಂಡಿಗಳು ನಾಲ್ಕಾರು ದಿಕ್ಕಿನಲ್ಲಿರುತ್ತವೆ. ಅಲ್ಲಿ ಹರಾಜು ಮಾಡಿಕೊಂಡು ಬರುವ ವೇಳೆಗೆ ಎರಡು ಮೂರು ದಿವಸಗಳಾಗುತ್ತವೆ. ಅರ್ಧ ಗಂಟೆಯಿಂದ ಒಂದೂವರೆ ಗಂಟೆಯಪರೆಗೂ ಎರಡು ಅಂಗಡಿ ಹರಾಜು ತೆಗೆದುಕೊಳ್ಳುತ್ತದೆ ಎಂಡಪೋದೆ 100-150 ಹರಾಜುಗಳನ್ನು ಮಾಡಬೇಕಾದರೆ ಎಷ್ಟು ಕಾಲಾವಕಾಶಬೇಕಾಗುತ್ತದೆ ಎಂಬುದನ್ನು ಮಾನ್ಯ ಮಂತ್ರಿಗಳು ಗಮನಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಆದ್ದರಿಂದ ಸರ್ಕಾರದವರು ಕಟ್ಟಡಗಳನ್ನು ಕಟ್ಟಿಸಿಕೊಟ್ಟು ಆಮೇಲೆ ಮಾರ್ಕೆಟ್ ಆಕ್ಟ್‌ನ್ನು ಜಾರಿಗೆ ತಂದರೆ ತಾವು ತಂದಿರುವ ಸ್ಕೀಮು ಯಶಸ್ವಿಯಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. ಇನ್ನು ಸ್ಟೆಟುಗಳನ್ನು ಹರಾಜು ಹಾಕುತ್ತೇವೆ ಎಂದು ಹೇಳಿದರು. ಆ ಸ್ಟೆಟುಗಳನ್ನು ಹರಾಜು ಹಾಕುವುದಕ್ಕೆ ಪ್ರಯತ್ನ ಪಟ್ಟರೆ 100 ಅಂಗಡಿಗಳಿರುವ ಸ್ಥಳಗಳಲ್ಲಿ 100 ಜನ ಒಂದೇ ತರಹ ವರ್ತಕರು ಇರುತ್ತಾರೆ ಎಂದು ಹೇಳುವುದಕ್ಕಾಗುವುದಿಲ್ಲ. ಅವರಲ್ಲಿ ಅನುಕೂಲವಿರುವ ವರ್ತಕರು ಸ್ಟೆಟುಗಳನ್ನು ಕೊಂಡುಕೊಂಡು ಇತರರಿಗೆ ಸ್ಟೆಟುಗಳು ಸಿಕ್ಕದೆ ಹೋಗಬಹುದು. ಇದರಿಂದ ಸರ್ಕಾರದವರು ಏನು ಸ್ಕೀಮನ್ನು ಹಾಕಿಕೊಂಡಿದ್ದರೋ ಅದನ್ನು ಅಷ್ಟು ಯಶಸ್ವಿಯಾಗಿ ನಡೆಸಿಕೊಂಡು ಬರುವುದಕ್ಕಾಗುವುದಿಲ್ಲ. ಸಾಮಾನ್ಯವಾಗಿ ವರ್ತಕತನದಲ್ಲಿ ಈಗಿರತಕ್ಕಹಾಗೆ ಹತ್ತಾರು ವರ್ಷಗಳಲ್ಲಿ ದೊಡ್ಡ ಶ್ರೀಮಂತರಾಗಬಹುದು ಅಥವಾ ಅಂಗಡಿಗಳನ್ನು ಕಳೆದುಕೊಂಡು ಹೋಗುವ ಪರಿಸ್ಥಿತಿ ಬರುವುದೂ ಉಂಟು. ಈ ರೀತಿ ಆಗುವುದನ್ನು ನಾವು ಹಲವಾರು ವರ್ಷಗಳಿಂದ ನೋಡಿಕೊಂಡು ಬರುತ್ತಿದ್ದೇವೆ. ಹೀಗೆ ನಡೆದುಕೊಂಡು ಬರುವುದರಿಂದ ಒಬ್ಬನ ಹೆಸರಿನಲ್ಲಿ ಸ್ಟೆಟನ್ನು ಕೊಟ್ಟಾಗ ಅವನ ಹೆಸರಿನಲ್ಲಿಯೇ ಅದು ಉಳಿದು, ಸರ್ಕಾರದವರು ಯಾವ ವ್ಯವಸ್ಥೆಯನ್ನು ಮಾಡುತ್ತಾರೋ ಅದರಿಂದ ಅವನಿಗೆ ಅನುಕೂಲವಾಗುತ್ತದೆ ಎಂದು ನಾನು ಹೇಳಲಾರೆ. ಆದ್ದರಿಂದ ಸರ್ಕಾರದವರು ಕಟ್ಟಡಗಳನ್ನು ಕಟ್ಟಿಸಿ ಯಾವ ಯಾವ ವರ್ತಕರಿಗೆ ಯಾವ ಯಾವ ತರಹ ಅಂಗಡಿಗಳು ಬೇಕೋ ಆ ಅಂಗಡಿಗಳನ್ನು ಬಾಡಿಗೆಗೆ ಕೊಟ್ಟು ಸ್ಕೀಮನ್ನು ಯಶಸ್ವಿಯಾಗಿ ಜಾರಿಗೆ ತರಬೇಕೆಂದು ನಾನು ಸರ್ಕಾರಕ್ಕೆ ಅರಿಕೆ ಮಾಡಿಕೊಳ್ಳುತ್ತೇನೆ.

*Sri Mulka GOVINDA REDDY (Chitaldrug).—I would like to support the resolution that has been moved by Sri T. G. Thimme Gowda. The members who have already spoken on this subject have expressed the difficulties that the people are undergoing under the regulated market system. Though the Government with good intentions brought forward this measure, though they established regulated markets in most of the industrial centres in Mysore State, the agriculturists are put to more hardship and they are not benefited even a bit by the present system. In Chitaldrug also, there is an agricultural regulated market and the produce that the agriculturist used to bring to the market used to be weighed and measured in the premises of the adjoining factory owners and in the premises of the oil merchants. So much so, the agriculturist was forced to under-sell his produce and he was not getting a fair treatment in the matter of measurement as well as rate. Added to this, the few cotton merchants, though they are speculators in this particular regulated market, are not speculating. They are not giving a fair price to the agriculturist. They combine themselves and enter into ugly alliances and they underbid all the goods that go into the regulated market and so the agriculturist does not get any benefit. If the Government is really serious, they should come in there as one of the buyers to guarantee a fair price.

Mr. SPEAKER.—The Member cannot ventilate all grievances concerning regulated markets while speaking on this Resolution.

Sri Mulka GOVINDA REDDY.—Instead of cotton merchants I will say cocoanut merchants. Even here the Government should come in as one of the buyers.

Mr. SPEAKER.—The resolution as it runs relates to the grant of at least five lakhs of rupees to Tiptur Market Committee for creating certain facilities.

Sri Mulka GOVINDA REDDY.—There should be marketing yards; there should be godowns. It is for this purpose they are asking this grant so that whenever the agriculturist brings his produce to the market, it must be weighed there, it must be measured there and if there is no bidder on that particular day, it may be stored in a godown so that the agriculturist may sell his produce whenever he gets a price. Added to this, if the Goverement does not come in there as one of the buyers, he will not get a fair price and he is merely exploited by the merchants and therefore I urge that the Government should think of forming co-operative societies or some other agency. Let them appear as one of buyers and let them give a guarantee of a fair price to the agriculturist.

*Sri A. BHEEMAPPA NAIK (Molakalmuru).—Sir, in further supporting this resolution, I wish to bring to the notice of the House that we have passed Warehouses Act according to which wherever there was necessity of godowns, the Government must come forward to construct buildings and make arrangements for storing these commodities. Unfortunately that has been a dead letter Act. More than four years have elapsed but no action has been taken. More than that, it is surprising to know that the Government have been trying to sell sites in public auction, which is opposed to all canons of marketing system itself. Nowhere has this happened. I do not know what the special reasons are to sell all those sites in public auction. How do you prevent a non-merchant from bidding for sites? You cannot say that non-merchants should not bid for sites when you sell them in public auction. A capitalist will come forward and purchase all those sites and keep them for himself. How can you prevent it? Then what happens is, he will make profit by constructing buildings there. Even in Chitaldrug we have allotted sites. There is a regulated market; we have to encourage them; if they come forward to build shops, the Government should come forward to give loans to them. So, the demand made by Sri Thimme Gowda is just and proper and the Government must unhesitatingly accept it. When you are trying to construct houses for everybody why not in the interest of the agriculturist, and in the interest of the merchants give liberal loans and recover them in instalments? The property will be yours until the loan is cleared. I cannot understand why there should be a 99 years' lease as though the Government want to be the proprietor. It is not correct. Let the Government sell the sites at upset price and give them loans and necessary fiuances for constructing buildings. They were doing their own business in their own way. You want them to vacate those places and you want them to go to a definite place and do their business. If that is your intention, you cannot simply ask them to go their at their own cost and come under their control. If you want them to come under your control, you must also at the same time create facilities for them to construct buildings at that particular place. If it is to be done properly our merchants should be definitely allotted sites in that land. They must be given all facilities. If you want really regulated markets to thrive, if you want that Act to be implemented, you ought to give all facilities. I, therefore feel that the request is just and proper and I would specially appeal to the Minister for Agriculture to cancel the auction and allot those sites at upset price.

3 P.M.

*Sri T. MARIAPPA (Mysore City North).—Sir, it is a most non-controversial subject placed before this House. It is very unfortunate that in a matter of this kind, there should be differences of opinion. What is placed before the

(SRI T. MARIAPPA.)

House is this—that the auction of the sites should be stopped. It passes one's comprehension why Government should embark on a policy of auctioning sites specially acquired for a regulated market. Sir, unfortunately, the history of the policy adopted towards the regulated markets in this country is not uniform. Different States have carved out different policies and thereby the very object of the Agricultural Produce Marketing Act has not been carried out in the spirit in which the entire Act has to be carried out. What was intended there was to ensure proper prices for the agriculturists, the producers, and proper weights and measures and the necessary conveniences for the producers should be provided for at the place of the business, *viz.*, the regulated market.

If you look into the history of the regulated market in Mysore—the permanent services put up a scheme costing more than fifty lakhs of rupees for bringing into existence a regulated market. If you kindly go through the history of the Davangere market, you will see that no Government would have brought it into being if they had adhered to the proposals formed by the Services. Here I must say that those proposals were idealistic. But the Government had to spend fifty to fifty-five lakhs. The first estimate was for fifty-five lakhs and now it would have been more than a crore. If you had stuck to that scheme of things, it would have been impossible to bring into existence a regulated market. But in accordance with the feelings prevailing in the country, and as there was paucity of funds, we have had to devise a middle course so that both the merchant and the producer should be brought together for the mutual benefit of each other. Therefore, subsequently that policy has been revised and instead of spending lakhs and lakhs for establishing regulated markets, it was decided to acquire necessary land, parcel out the entire land into sites and allot the sites at an upset price. There was no question of auctioning. In certain places we might have got better prices but that was not the thing. We wanted all the merchants to shift to one place. Therefore it is incumbent on the Government to create all facilities now for the running of that regulated market. Therefore, the co-operation of the merchant is absolutely essential as the co-operation of the producer is equally essential. Therefore, to place the sites for auction would not be in the interest of the regulated markets. Sir, I believe that my friend will certainly bear with me when I say that the regulated market with a small advance can secure great benefit to the Agriculturies. Take for example the Tiptur regulated market; we had advanced Rs. 25,000, and with the co-operation of the producers and the merchants the market began to operate and to-day it is a flourishing market and it has secured immense benefit to the agriculturist. In spite of little pin pricks, it has conferred on the producers immense benefit because the prices that they are getting today is far above what they were getting prior to the establishment of a regulated market there. Also, in Davangere, in the beginning there was a little difficulty. But with a little explanation, it was possible to get all of them into the regulated market. My friend will therefore see that the sites are not auctioned and that they are allotted to the merchants to practically carry on the business in that particular place. The Government have got a list of such merchants. Moreover they are licensed and registered merchants and therefore there is no need to auction the sites. Supposing, as my friend Sri Bheemappa Naik suggested, someone else might try to purchase in order to make money. Nobody can prevent them from purchasing the same. It is in the interest of the regulated market that others are not introduced into them. On the other hand, in Mysore City, sites were given at a concession rate. In fact the demand was at Rs. 12 per square yard. But they were granted at Rs. 7-8-0 per square yard.

SRI A. BHEEMAPPA NAIK.—At Chitaldrug, the price was fixed at one rupee a square yard.

Sri T. MARIAPPA.—I negotiated with my friends and the sites were allotted to the merchants. So also in Davangere, the sites were allotted and beautiful buildings have been put up. Here also they should not unnecessarily expect opposition from the merchants. On the other hand they will get the fullest co-operation, if only they extend their friendship and give the sites to the merchants. The Government should not make any profit out of the sites.

Mr. SPEAKER.—The House will rise and meet at 3-40 P.M.

The House adjourned for Lunch at Ten Minutes past Three of the Clock and reassembled at Forty-five Minutes past Three of the Clock.

[MR. SPEAKER in the Chair.]

ಡಾ॥ ಆರ್. ನಾಗನಗೌಡ (ವ್ಯವಸಾಯ ಶಾಖೆಯ ಮಂತ್ರಿಗಳು).—ಸ್ವಾಮಿ, ಈ ನಿರ್ಣಯವನ್ನು ತಂದಂಥ ಮಹನೀಯರು ತಿಪ್ಟೂರಿನಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ ಚೆನ್ನಾಗಿ ಆಗಬೇಕೆಂಬ ಸದುದ್ದೇಶದಿಂದ ಮತ್ತು ತೀವ್ರತೆಯಿಂದ ಮಂಡಿಸಿದ್ದಾರೆ. ತಿಪಟೂರಿನ ರೆಗ್ಯುಲೇಟೆಡ್ ಮಾರ್ಕೆಟ್ಟು ನಮ್ಮ ಸಂಸ್ಥಾನದಲ್ಲಿ ಆದ ಮೊದಲನೆಯ ರೆಗ್ಯುಲೇಟೆಡ್ ಮಾರ್ಕೆಟ್ಟು. ಮೈಸೂರಿನಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ ಆಕ್ಟ್ ಆಗಿ ಮೊದಲು ಅದನ್ನು ಜಾರಿಗೆ ತಂದದ್ದು ತಿಪಟೂರಿನಲ್ಲಿ. ಆಗ್ಗೆ ಇದನ್ನು ಬಹಳ ಉತ್ಸಾಹದಿಂದ ಪ್ರಾರಂಭ ಮಾಡಿ, ಸುಮಾರು 28 ಲಕ್ಷ ರೂಪಾಯಿಗಳವರೆಗೂ ಖರ್ಚು ಮಾಡಿ ಕಟ್ಟಡ ಮುಂತಾದುವುಗಳನ್ನು ಕಟ್ಟಬೇಕೆಂದು ತೀರ್ಮಾನಮಾಡಿತ್ತು.

ಇದೆಲಾ ನಡೆದದ್ದು 1948ರಲ್ಲಿ. ಆದರೆ, ಆ ನಂತರ ಈ ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಯವರು ಒಂದು ತೀರ್ಮಾನ ಮಾಡಿ ಸರ್ಕಾರದವರು ಅಷ್ಟು ದೊಡ್ಡ ಪೊತ್ತದಿಂದ ಯಾವ ಬಿಲ್ಡಿಂಗ್ ಮುಂತಾದುವುಗಳನ್ನು ಕಟ್ಟಬೇಕೆಂದು ಹೇಳಿದ್ದರೋ ಅದನ್ನು ಬದಲಾವಣೆ ಮಾಡಿ ಸರ್ಕಾರದವರೇ ಕಟ್ಟಡಗಳನ್ನು ಕಟ್ಟುವುದಕ್ಕೆ ಬದಲಾಗಿ ಸ್ಟೆಟುಗಳನ್ನು ಮಾಡಿ ವರ್ತಕರಿಗೆ allot ಮಾಡಿ ಅವರೇ ಕಟ್ಟಡಗಳನ್ನು ಕಟ್ಟುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಿರ್ಣಯಮಾಡಿ ಕಳುಹಿಸಿದರು. ಅದರ ಮೇಲೆ ಸರ್ಕಾರದವರು ಈ ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಗೆ ಒಟ್ಟು ಸುಮಾರು 1,60,000 ರೂಪಾಯಿಗಳನ್ನು ಸಾಲದ ರೂಪವಾಗಿ ಕೊಟ್ಟರು. ಅದರಲ್ಲಿ ಕೆಲವು ಭಾಗ ಅಲ್ಲಿ ಸ್ಟೆಟುಗಳನ್ನು ಕೊಂಡು ಕೊಳ್ಳುವುದಕ್ಕೆ ಉಪಯೋಗವಾಗಿದೆ. ತಿಪಟೂರನ್ನು ನೋಡಿದವರಿಗೆ ಗೊತ್ತು, ಬಹಳ ಉತ್ತಮವಾದ ಸ್ಟೆಟುಗಳನ್ನು ಆ ಮಾರ್ಕೆಟ್ಟಿಗೆ ಒದಗಿಸಿಕೊಟ್ಟಿದ್ದಾರೆ ಎಂಬುದು. ಅಲ್ಲಿ ಕಟ್ಟಡಗಳನ್ನು ಕಟ್ಟುವುದಕ್ಕೆ ಗುರುತು ಮಾಡಿಕೊಟ್ಟಿದ್ದಾರೆ. ಅವನ್ನೆಲ್ಲಾ ನೋಡಿದರೆ ಮುಂದೆ ಎಂಥ ಉತ್ತಮ ಮಾರ್ಕೆಟ್ಟು ಆದಾಗುತ್ತದೆಂದು ಗೊತ್ತಾಗುತ್ತದೆ. ಅಲ್ಲದೆ, ಈಗಾಗಲೇ ರೆಗ್ಯುಲೇಟೆಡ್ ಮಾರ್ಕೆಟ್ಟಿನವರು ಎರಡು ಕಟ್ಟಡಗಳನ್ನು ಕಟ್ಟಿ ಅಲ್ಲಿಗೆ ಬಂದಂಥ ಸರಕುಗಳನ್ನು ಇಳಿಸಿಕೊಳ್ಳುವುದಕ್ಕೆ ಏರ್ಪಾಡು ಮಾಡಿದ್ದಾರೆ.

ಆದರೆ, ಈಚೆಗೆ ದುರದೃಷ್ಟದಿಂದ ಮೊದಲು ವರ್ತಕರಲ್ಲಿ ಇದ್ದಂಥ ಉತ್ಸಾಹ ಕಡಮೆಯಾಗಿದೆ. ನಾನು ಈಗ ಕೆಲವು ದಿವಸಗಳ ಹಿಂದೆ ಆ ಮಾರ್ಕೆಟ್ಟನ್ನೇ ನೋಡುವುದಕ್ಕೆ ಹೋಗಿದ್ದೆ. ಆಗ್ಗೆ, ನಾನು ಹಿಂದೆ ಲೈಸೆನ್ಸ್ ಪಡೆದಿದ್ದಂಥ ವರ್ತಕರಿಗೆ ಸ್ಟೆಟುಗಳನ್ನು ತೆಗೆದುಕೊಳ್ಳಬೇಕೆಂದು ಪ್ರೋತ್ಸಾಹ ಮಾಡಿದಾಗ ಅವರು ಸದ್ಯಕ್ಕೆ ತಮಗೆ ಅಷ್ಟೊಂದು ಚೈತನ್ಯವಿಲ್ಲ, ದುಡ್ಡಿನ ಅಭಾವದಿಂದ ಈ ಪ್ರಶ್ನೆಯನ್ನು ಮುಂದಕ್ಕೆ ಹಾಕಬೇಕೆಂದು ಹೇಳಿದರು. ಆದರೆ, ಈ ನಿರ್ಣಯವನ್ನು ತಂದ ಮಹನೀಯರು ಹೇಳಿದ ಹಾಗೆ, ಅಲ್ಲಿನ ವ್ಯೆತರಿಗೆ ತಮ್ಮ ಮಾಲನ್ನು ತಂದಕ್ಷಣ ಇಳಿಸಿಕೊಳ್ಳುವುದಕ್ಕೆ ಅನುಕೂಲವಾಗುವಂತೆ ಎಷ್ಟು ಶೀಘ್ರವಾಗಿ ರೆಗ್ಯುಲೇಟೆಡ್ ಮಾರ್ಕೆಟ್ ಏರ್ಪಾಡಾಗಿ ವ್ಯಾಪಾರ ಜರುಗುವುದಕ್ಕೆ ಅನುಕೂಲವಾದರೆ ಅಷ್ಟೊಒಳ್ಳೆಯದೆಂದು ಅವರು ಭಾವಿಸುತ್ತಾರೆ. ಆದ್ದರಿಂದ ಶೀಘ್ರವಾಗಿ ಇದನ್ನು ಏರ್ಪಾಡುಮಾಡುವುದು ಅವಶ್ಯಕ ಈಗ ಆ ಸ್ಟೆಟುಗಳನ್ನು ಯಾರಾದರೂ ಬಂದು ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲ. ಲೈಸೆನ್ಸ್ ಇರತಕ್ಕ ವರ್ತಕರೇ ತೆಗೆದುಕೊಳ್ಳಬೇಕು. ಈಗ ಆ ಸ್ಟೆಟುಗಳಿಗೆ ಕನಿಷ್ಠ ದರ ಇಷ್ಟೆಂದು ನಿಗದಿ ಮಾಡಿದೆ. ನಾಲ್ಕು ತರಹ ಸ್ಟೆಟುಗಳನ್ನು ಅಲ್ಲಿ ಏರ್ಪಡಿಸಿದೆ. ಆ ಸ್ಟೆಟುಗಳಲ್ಲಿ ಅನೇಕರು ಯಾವುದೋ ಒಂದು ಸ್ಟೆಟನ್ನೇ ಬೇಕೆಂದು ಕೇಳಿದಾಗ ಯಾರಿಗೆ ಕೊಡಬೇಕೆನ್ನುವುದು ಕಷ್ಟವಾದ ಕೆಲಸ. ಅದರ ಮೇಲೆ ಇಷ್ಟು ದಿವಸದವರೆಗೂ ಎರಡು ಮೂರು ಸಾರಿ ಸ್ಟೆಟುಗಳು allot ಆಗದೆ ವರ್ತಕರು ಯಾರೂ ಕೊಂಡುಕೊಳ್ಳುವುದಕ್ಕೆ ಬಾರದ ಕಾರಣ ಅವನ್ನು auction ಮಾಡಬೇಕೆಂದು ಮಾರ್ಕೆಟ್ ಕಮಿಟಿಯವರು ತೀರ್ಮಾನ ಮಾಡಿದ್ದಾರೆ. ಈಗಲೂ ವ್ಯಾಪಾರಸ್ಥರು ಮುಂದೆ ಬಂದು ಸ್ಟೆಟುಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳಿ ಅದರಂತೆ ಕಮಿಟಿಯವರು ನಿರ್ಣಯ ಮಾಡಿದರೆ ಸರ್ಕಾರದವರಿಗೆ ಅದರಂತೆ ಮಾಡುವುದಕ್ಕೇನೂ ಆಕ್ಷೇಪಣೆಯಿಲ್ಲ.

ಈಗ ನಾನಾಗಲೇ ಹೇಳಿದ ಹಾಗೆ, ಒಂದು ಲಕ್ಷ 56 ಸಾವಿರ ರೂಪಾಯಿಗಳನ್ನು ಕೊಟ್ಟಿದೆ ನಿಜ. ತಿಪಟೂರಿನ ವ್ಯಾಪಾರಸ್ಥರು ಈಗ ಮನೆಗಳನ್ನ ಕಟ್ಟುವುದಕ್ಕೆ, ಅಂಗಡಿಗಳನ್ನು ಕಟ್ಟುವುದಕ್ಕೆ, ನಮಗೆ ಸರ್ಕಾರದವರು ಸಹಾಯಮಾಡಬೇಕೆಂದು ಏನು ಹೇಳಿದ್ದಾರೋ, ಆ ವಿಷಯವನ್ನು ಸರ್ಕಾರದವರು ಯೋಚನೆಯಲ್ಲಿಟ್ಟುಕೊಂಡಿದ್ದಾರೆ. ಶ್ರೀಮಾನ್ ಭೀಮಪ್ಪನಾಯಕರು ಚಿತ್ರದುರ್ಗದ ವಿಷಯವಾಗಿ ಹೇಳಿದ ಹಾಗೆ, ಹೆಚ್ಚಿಗೆ ಏನೂ ಸಹಾಯ ಕೊಡಲಿಲ್ಲ. ಒಂದೊಂದು ಅಂಗಡಿ ಕಟ್ಟಿಕೊಳ್ಳಲಿಕ್ಕೆ 2,000 ರೂಪಾಯಿಗಳವರೆಗೂ ಕೊಟ್ಟಿದ್ದೇವೆ. ಇಲ್ಲಿ ಈಗ 100 ಸ್ಟೆಟುಗಳಿವೆ. 100 ಸ್ಟೆಟುಗಳಲ್ಲಿ ಕಟ್ಟಡಗಳನ್ನು ಕಟ್ಟಬೇಕಾದರೆ ಸರಾಸರಿ 1,000 ದಿಂದ 3,000 ರೂಪಾಯಿಗಳವರೆಗೂ ಆಗುತ್ತದೆ ಎಂದರೆ ಇದಕ್ಕೆ ಎರಡು ಲಕ್ಷ ರೂಪಾಯಿಗಳವರೆಗೂ ಬೇಕಾಗುತ್ತದೆ. ಸಾಲ ಕೊಡುವುದರ ವಿಷಯ ಸರ್ಕಾರದ ಮುಂದೆ ಇದೆ. ಅದನ್ನ ನಾವು ಶೀಘ್ರದಲ್ಲೇ ತೀರ್ಮಾನ ಮಾಡುತ್ತೇವೆ. ಇದರ ಉದ್ದೇಶ ಏನು ಎಂದರೆ ಜಾಗ್ರತೆ ವ್ಯಾಪಾರಸ್ಥರು ಕಟ್ಟಡಕಟ್ಟಿಕೊಳ್ಳಲಿಕ್ಕೆ ಸಹಾಯವಾಗುತ್ತದೆ ಎಂದು ಹೇಳಬಹುದು. ಆ ರೀತಿ ಹೇಳುವುದಕ್ಕಾಗುವುದಿಲ್ಲ.

(ಡಾ॥ ಆರ್. ನಾಗನಗೌಡ.)

ಏಕೆಂದರೆ ಡಿಸ್ಪೈನ್ ಮುಂತಾದುವನ್ನು ಮಾಡಿಸಿ ಆ ಪ್ರಕಾರ ಕಟ್ಟಡ ಕಟ್ಟಬೇಕೆಂದರೆ ಅವರಿಗೆ ಬಹಳ ಕಷ್ಟವಾಗಬಹುದು. ಅದಕಾರಣ ಸದ್ಯಕ್ಕೆ ಕೆಲಸ ಜರುಗುವಂತೆ ಮಾತ್ರ ಮಾಡತಕ್ಕ ಏರ್ಪಾಡು ಮಾಡಿಕೊಂಡು, ಅಲ್ಲಿ ಹೋಗಿ ವ್ಯಾಪಾರ ಮಾಡುವುದಕ್ಕೆ ಏನು ಸಹಾಯ ಬೇಕು ಎಂದು ಕೇಳಿದ್ದಾರೋ ಆ ಸಹಾಯ ಕೊಡಲಕ್ಕೆ ಸರ್ಕಾರದವರು ಪೂರ್ಣ ಸಹಾನುಭೂತಿಯಿಂದ ಯೋಚನೆ ಮಾಡುತ್ತಾರೆ. ಇಷ್ಟು ಭರವಸೆ ಕೊಟ್ಟ ಮೇಲೆ ಈ ನಿರ್ಣಯವನ್ನು ಶ್ರೀಮತ್ ತಿಮ್ಮೇಗೌಡರು ವಾಪಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಜಿ. ತಿಮ್ಮೇಗೌಡ.—ಮಾನ್ಯ ಮಂತ್ರಿಗಳ ಭರವಸೆಯ ಮೇಲೆ ಸಭೆಯ ಒಪ್ಪಿಗೆ ಪಡೆದು ನನ್ನ ನಿರ್ಣಯವನ್ನು ವಾಪಸು ತೆಗೆದುಕೊಳ್ಳುತ್ತೇನೆ.

The resolution was, by leave, withdrawn.

(No. 4). Nationalisation of Mysore Bank.

*Sri Mulka GOVINDA REDDY (Chitaldrug).—Sir, I beg to move the following resolution :

> "This Assembly is of the opinion that steps be taken for immediately urging for the nationalisation of the Bank of Mysore, Ltd."

I know that banking is a central subject. But all the same it is necessary and desirable for us, and we are entitled to express our views in the matter and urge the matter before the Government of India for their serious consideration. This Assembly has already taken a momentous decision regarding the nationalisation of the Kolar Gold Mines. The Government of India have already nationalised the Imperial Bank of India. They have also nationalised Life Insurance Business and it is the accepted policy of the Government of India as well as of this Government that all such businesses, banking business, insurance business, should be nationalised and it is in keeping with the declared policy of the Government of India that this resolution has been brought forward.

Sir, trade and commerce of any State are controlled by banking system. In the capitalistic structure the banking business plays a very important role. We have accepted that the socialistic pattern of society should be the aim of the Government and of the people and that both the Government and the people should take all necessary steps to achieve that goal. When that has been accepted it is but necessary that the financial resources of the State or the country are controlled and managed by the State itself.

When the Government of India nationalised the Imperial Bank of India they took certain steps. They paid some compensation, which was not acceptable to a good number of members of the Parliament. The compensation that was paid to the shareholders of the State Bank or the Imperial Bank was too high and we know that in Mysore though the face value of the shares of the Bank of Mysore is 100, its market value fluctuates between 200 and 400. The shareholders have already received from the Bank by way of dividend 200 to 300 per cent and some of them 500 per cent of their investments. Sir, when we accept that the policy of the Govenment should be to achieve the socialistic pattern of society, we should see that the money in the hands of the capitalist is immobilised and we should not encourage accumulation of money in the hands of the capitalists. In this particular case people that have invested in the Bank of Mysore are quite well off. They have already received 300 to 400 per cent of their investments. I therefore plead that the compensation that is to be paid to the shareholders of this Bank should not be more than the face value of the share.

It is unnecessary to say whether I am a shareholder in the Bank of Mysore or not. But one who is interested in the well-being of the people and one who is wedded to the cause of socialism will plead and strive and agitate and fight for establishing that ideal that has been placed before us. All those who now pay lip sympathy to this objective and all those who proclaim from their housetops that they are wedded to socialistic pattern of society should have no objection to my suggestion. On the other hand, it should be the policy of those people that money in the hands of the capitalist should be immobilised and that money should flow into the coffers of the Government